# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 62/16-17

ದಿನಾಂಕ : 26 - 10 -2016.

ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
| --- | --- | --- |
| 1. ಶ್ರೀ ತಿಮ್ಮಪ್ಪ ಗೌಡ ಎನ್<br>ಬಿನ್ ದಿ| ರಾಮಣ್ಣ ಗೌಡ,<br>ನಡುಬೈಲು ಮನೆ, ಮುಂಡೂರು ಗ್ರಾಮ,<br>ಪುತ್ತೂರು ತಾಲೂಕು ದ.ಕ.<br>2. ಶ್ರೀಮತಿ ಚೆಲುವಮ್ಮ<br>ಕೋಂ ಸಾಂತಪ್ಪ ಗೌಡ<br>ನಡುಬೈಲು ಮನೆ, ಮುಂಡೂರು ಗ್ರಾಮ,<br>ಪುತ್ತೂರು ತಾಲೂಕು ದ.ಕ.<br>3. ಶ್ರೀಮತಿ ರಾಮಕ್ಕ<br>ಕೋಂ ಸೇಸಪ್ಪ ಗೌಡ<br>ನಡುಬೈಲು ಮನೆ, ಮುಂಡೂರು ಗ್ರಾಮ,<br>ಪುತ್ತೂರು ತಾಲೂಕು ದ.ಕ.<br>4. ಶ್ರೀಮತಿ ಸುಂದರಿ<br>ಕೋಂ ಐತ್ತಪ್ಪ ಗೌಡ,<br>ನಡುಬೈಲು ಮನೆ, ಮುಂಡೂರು ಗ್ರಾಮ,<br>ಪುತ್ತೂರು ತಾಲೂಕು ದ.ಕ. | - ಮತ್ತು - | ಕಂದಾಯ ನಿರೀಕ್ಷಕರು<br>ಪುತ್ತೂರು ಹೋಬಳಿ<br>ಪುತ್ತೂರು ತಾಲೂಕು ದ.ಕ. |

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಪುತ್ತೂರು ತಾಲೂಕು ಮುಂಡೂರು ಗ್ರಾಮದ MR H: 58/2013-14 ದಿನಾಂಕ: 20-03-2014 ರಂತೆ ತಹಶೀಲ್ದಾರರು ನೀಡಿದ ನ್ಯುಟೇಶನ್ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಪುತ್ತೂರು ತಾಲೂಕು ಮುಂಡೂರು ಗ್ರಾಮದ ಸ.ನಂ. 44/5 ರಲ್ಲಿ 0.46 ಎಕ್ರೆ, 46/2ಬಿ ರಲ್ಲಿ 2.38 ಎಕ್ರೆ, 46/3 ರಲ್ಲಿ 0.50 ಎಕ್ರೆ, 47/1ಎ2 ರಲ್ಲಿ 0.18 ಎಕ್ರೆ ಜಮೀನು ಪುತ್ತೂರು ಸ.ರಿ. ಕಛೇರಿ ದಸ್ತಾವೇಜು ನಂಬ್ರ 5603/2013-14 ದಿನಾಂಕ: 04-02-2014 ರಂತೆ ಅಪೀಲುದಾರರ ಕುಟುಂಬದೊಂದಿಗೆ ವಿಭಾಗಪತ್ರ ಆಗಿದ್ದು, 'ಎ' ಶೆಡ್ಯೂಲ್ 1ನೇ ತಿಮ್ಮಪ್ಪ ಗೌಡ, 2ನೇ ರೂಪವಾಣಿ ಎನ್ ಮತ್ತು 3ನೇ ಜಯ ಎನ್ ರವರ ಹಿಸ್ಸೆಗೆ 'ಬಿ' ಶೆಡ್ಯೂಲ್ 4ನೇ ಚೆಲುವಮ್ಮ, 5ನೇ ಮೋನಪ್ಪ ಗೌಡ, 6ನೇ ಚಂದ್ರ ಗೌಡ ಹಿಸ್ಸೆಗೆ 'ಸಿ' ಶೆಡ್ಯೂಲ್ ಆಸ್ತಿಯ, 7ನೇ ರಾಮಕ್ಕ, 8ನೇ ಪುರಂದರ ಎನ್, 9ನೇ ಪದ್ಮನಾಭ ಎನ್, 10ನೇ ಸುರೇಶ ಎನ್ ಹಿಸ್ಸೆಗೆ 'ಡಿ' ಶೆಡ್ಯೂಲ್ 11ನೇ

ಸುಂದರಿ, 12ನೇ ಹರೀಶ್ ಎನ್, 13ನೇ ಧರ್ಣಪ್ಪ ಎನ್, 14ನೇ ಜೀವನ್ ಎನ್, 15ನೇ ಲೋಕೇಶ ಎನ್, 16ನೇ ಕುಸುಮ ಎನ್ ರವರ ಹಿಸ್ಸೆಗೆ ವಿಂಗಡಿಸಲಾಗಿರುತ್ತದೆ.ಪುತ್ತೂರು ಕಂದಾಯ ನಿರೀಕ್ಷಕರ ಎಂ.ಆರ್ ಸಂಖ್ಯೆ H: 58/13-14 ರ ಮ್ಯುಟೇಶನ್ ನಂತೆ ಪಹಣಿ ದಾಖಲಾತಿ ಸಂದರ್ಭ ಮೇಲ್ಕಂಡ ಎ, ಬಿ, ಸಿ, ಡಿ ಶೆಡ್ಯೂಲ್ ಪ್ರಕಾರ ಪಹಣಿ ದಾಖಲು ಆಗದೆ ತಪಾವತು ಆಗಿರುತ್ತದೆ. ಇದರಿಂದ ತಮಗೆ ಬಹಳಷ್ಟು ತೊಂದರೆ ಉಂಟಾಗಿದ್ದು, ವಿಭಾಗ ಪತ್ರ ಹಕ್ಕಿನಂತೆ ಆಯಾಯ ಶೆಡ್ಯೂಲ್ ದಾರರ ಹೆಸರಲ್ಲಿ ಪಹಣಿ ದಾಖಲಾತಿಗೆ ಆದೇಶ ನೀಡುವಂತೆ ಕೋರಿ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 22-06-2016 ರಂದು ಹಾಜರಾಗುವಂತೆ ನೋಟೀಸು ನೀಡಿ ಈ ದಿನವೇ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ದಸ್ತಾವೇಜು ನಂಬ್ರ 5603/2013-14 ದಿನಾಂಕ: 04-02-2014 ರ ವಿಭಾಗ ಪತ್ರದಂತೆ ಎ, ಬಿ, ಸಿ, ಡಿ ಶೆಡ್ಯೂಲ್ ದಾರರ ಹೆಸರಿಗೆ ಪಹಣಿ ದಾಖಲಾತಿ ಮಾಡುವಂತೆ ಕೋರಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ವಿಭಾಗಪತ್ರದಲ್ಲಿರುವಂತೆ ಶೆಡ್ಯೂಲ್ ದಾರರನ್ನು ಜಂಟಿಯಾಗಿ ದಾಖಲಿಸಿರುವುದಿಲ್ಲ. ಪ್ರತೀ ಶೆಡ್ಯೂಲ್ ನಲ್ಲಿ ಮುಖ್ಯ ಸ್ವಾಧೀನದಾರರ ಹೆಸರಿನ ಎದುರು ವಿಸ್ತೀರ್ಣ ನಮೂದಿಸಿದ್ದು, ಉಳಿದ ಜಂಟಿ ಖಾತೆದಾರರ ಹೆಸರನ್ನು ದಾಖಲಿಸಿರುವುದಿಲ್ಲ. ಅದು ಪ್ರತ್ಯೇಕವಾಗಿ ದಾಖಲಿರುತ್ತದೆ. ಇದು ಉಪನೋಂದಣಾಧಿಕಾರಿಗಳ ಕಚೇರಿಯಿಂದ X – mail ಮೂಲಕ ವರ್ಗಾವಣೆ ಸಂದರ್ಭದಲ್ಲಿ ತಪಾವತು ಆಗಿರುತ್ತದೆ. ಪ್ರಶ್ನಿತ ಮ್ಯುಟೇಶನ್ ಎಂ ಆರ್ ಎಚ್ 58/2013-14 ರಲ್ಲಿ ವಿಭಾಗ ಪತ್ರ ದಾಸ್ತಾವೇಜಿನಲ್ಲಿ ನಮೂದಿಸಿದ ಸ.ನಂಬ್ರಗಳು ಜೊತೆ ಖಾತಾದಾರರ ಹೆಸರು ತಪಾವತು ಆಗಿರುವುದರಿಂದ ಪ್ರಶ್ನಿತ ಮ್ಯುಟೇಶನ್ ಆದೇಶವನ್ನು ರದ್ದುಗೊಳಿಸಿ ನೋಂದಣಿಯಾದ ವಿಭಾಗ ಪತ್ರದಂತೆ ಸಂಬಂಧಪಟ್ಟ ಶೆಡ್ಯೂಲ್ ದಾರರ ಹೆಸರಲ್ಲಿ ಪಹಣಿ ದಾಖಲಿಸುವುದು ಕಾನೂನು ಸಮ್ಮತವಾಗಿರುವುದರಿಂದ ಪ್ರಕರಣದಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಪುತ್ತೂರು ತಹಶೀಲ್ದಾರರ ಮುಂಡೂರು ಗ್ರಾಮದ MR ಸಂಖ್ಯೆ H: 58/2013-04 ದಿನಾಂಕ: 20-03-2014 ನ್ನು ರದ್ದುಗೊಳಿಸಿದೆ. ಪುತ್ತೂರು ಸ.ರಿ. ಕಛೇರಿಯ ದಸ್ತಾವೇಜು ನಂಬ್ರ 5602/2013-14 ರಂತೆ ಸಂಬಂಧಪಟ್ಟ ಶೆಡ್ಯೂಲ್ ದಾರರ ಹೆಸರಲ್ಲಿ ಖಾತೆ / ಪಹಣಿ ದಾಖಲಾತಿ ಬಗ್ಗೆ ಮರು ಪರಿಶೀಲನಯಿಂದ ನಿಯಮಾನುಸಾರ ಕ್ರಮ ಜರಗಿಸಲು ಪುತ್ತೂರು ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 26- 10 - 2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರಿಗೆ ಅಂಚೆ ಮುಖಾಂತರ ಜ್ಯಾರಿ.